(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ಅಸಲು ದಾವೆ ನಂ.1129/2017

| | | | | | |
|---|---|---|---|---|---|
| ಸಾಕ್ಷಿಯ ಹೆಸರು | : | ಯೋಗೇಶ ಡಿ ಎಸ್ | ದಿನಾಂಕ | : | 29-10-2024 |
| ತಂದೆಯ ಹೆಸರು | : | ಸಣ್ಣಪ್ಪ | ಸಿ ಡಬ್ಲ್ಯೂ | : | 12 |
| ವಯಸ್ಸು | : | 59 ವರ್ಷ | ಪಿ ಡಬ್ಲ್ಯೂ | : | 9 |
| ಉದ್ಯೋಗ | : | ಟೈಲರಿಂಗ್ ಕೆಲಸ | | | |
| ವಿಳಾಸ | : | ತುಮಕೂರು | | | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯನ್ನು ನಾನು ನೋಡಿಲ್ಲ. ಸುಮಾರು 8-10ವರ್ಷಗಳ ಹಿಂದೆ ನಾನು ಬೈಕ್ ನಲ್ಲಿ ದೇವರ ಹಳ್ಳಿ ಗ್ರಾಮದಿಂದ ಅರಕಲಗೂಡಿಗೆ ಬರುತ್ತಿದ್ದಾಗ ತುಂಬಾ ಜನರು ನಿಂತಿದ್ದರು. ಆಗ ಪೋಲೀಸರು ಒಂದು ಸಹಿ ಮಾಡುವಂತೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ನಿಪಿ-4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ವಿಚಾರವಾಗಿ ನಾನು ಪೋಲಿಸಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನಿಪಿ-4 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4ಸಿ ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಗಿದೆ.**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 07-05-2017 ರಂದು ನಾನು ನನ್ನ ಬಾಬ್ತು ಬೈಕ್ ನಲ್ಲಿ ನಮ್ಮ ಗ್ರಾಮದಿಂದ ಅರಕಲಗೂಡಿಗೆ ಹೊನ್ನವಳಿ ಗ್ರಾಮದ ಹತ್ತಿರ ಬರುತ್ತಿದ್ದಾಗ ಹೊಳೆನರಸೀಪುರದ ಕಡೆಯಿಂದ ಟೆಂಪೋ

ಟ್ರಾಕ್ಸ್ ನ  ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ  ಓಡಿಸಿಕೊಂಡು ಬಂದು ರಸ್ತೆ ಬದಿಯ ಕಲ್ಲುಗಳಿಗೆ ಡಿಕ್ಕಿ ಮಾಡಿ ಕೆಡವಿದ ಪರಿಣಾಮ ಟೆಂಪೋ ಟ್ರಾಕ್ಸ್ ನ ಲ್ಲಿದ್ದ 10-11 ಜನರಿಗೆ ಪೆಟ್ಟಾಗಿದ್ದು ನಾನು, ಸರಸಮಣಿ ಮತ್ತು ಸುನಂದಮ್ಮ ರವರನ್ನು ಸುಧಾರಿಸಿ ಅಂಬ್ಯುಲೆನ್ಸ್‌ಗೆ ಫೋನ್ ಮಾಡಿ ಚಿಕಿತ್ಸೆಗಾಗಿ ಅಕರಲಗೂಡು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನನೆ ಎಂದರೆಸರಿಯಲ್ಲ. ಸರಸಮಣಿ ರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂರದೆ ಸರಿಯಲ್ಲ. ಈ ಅಪಘಾತಕ್ಕೆ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯನ್ನು ನೋಡಿದ್ದು ಮುಂದೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು.

ದಿಃ 09-05-2017 ರಂದು ಮಧ್ಯಾಹ್ನ 2.00 ರಿಂದ 3.00 ಗಂಟೆ ಸಮಯದಲ್ಲಿ ಚಾಸಾ -40 ರವರು ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ ಕೃತ್ಯ ಸ್ಥಳಕ್ಕೆ ನನ್ನನ್ನು ಬರಮಾಡಿಕೊಂಡು ಪಂಚರಾಗುವಂತೆ ಕೋರಿದ್ದರು ಎಂದರೆ ಸರಿಯಲ್ಲ. ಆ ಸಂಬಂದ ನಾನು ಕೃತ್ಯ ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿನ ಅಂಶಗಳು ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ಪಾಟೀ ಸವಾಲುಃ ಇಲ್ಲ**

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ.ಸ. ಇದೆ.

(**ರಘು ಎಂ.**)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ**
**ಅರಕಲಗೂಡು.**

®

( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಸಿ ಸಿ ನಂ.**401/2015**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಶಂಕರ್ | ದಿನಾಂಕ | ಃ | 18-10-2023 |
| ತಂದೆಯ ಹೆಸರು | ಃ | ಲೇಟ್ ತಮ್ಮೇಗೌಡ | ಸಿ ಡಬ್ಲ್ಯೂ | ಃ | 6 |
| ವಯಸ್ಸು | ಃ | 45 ವರ್ಷ | ಪಿ ಡಬ್ಲ್ಯೂ | ಃ | 4 |
| ಉದ್ಯೋಗ | ಃ | ವ್ಯವಸಾಯ | | | |
| ವಿಳಾಸ | ಃ | ವಡ್ಡರಹಳ್ಳಿ ಗ್ರಾಮ | | | |

**ಮುಖ್ಯ ವಿಚಾರಣೆ ಸಸಅ ರವರಿಂದ :-**

ಆರೋಪಿತರು ನನಗೆ ಗೊತ್ತು. ಚಾಸಾ-1 ರಿಂದ 5 ರವರು ಗೊತ್ತು. ಸುಮಾರು 10 ವರ್ಷಗಳ ಹಿಂದೆ ಸಂಜೆ 5.30 ರಿಂದ 6.00 ಗಂಟೆ ಸಮಯದಲ್ಲಿ ಗಲಾಟೆಯ ವಿಚಾರವಾಗಿ ಪೋಲೀಸರು ನಮ್ಮ ಊರಿಗೆ ಬಂದಿದ್ದರು. ಚಾಸಾ-1 ರವರ ಮನೆಯ ಹತ್ತಿರ ನಿಪಿ-1 ನ್ನು ಜರುಗಿಸಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಗಿದೆ.

ಪಾಟೀ ಸವಾಲು: ಸಸಅ ರವರಿಂದ :-

ದಿ: 12-10-2014 ರಂದು ಮದ್ಯಾಹ್ನ 3.00 ರಿಂದ 4.00 ಗಂಟೆ ಸಮಯದಲ್ಲಿ ಚಾಸಾ-3 ರವರು ತೋರಿಸಿದ ಕೃತ್ಯ ಸ್ಥಳದಲ್ಲಿ ನನ್ನನ್ನು ಮತ್ತು ಚಾಸಾ-4 ಮತ್ತು 5 ರವರನ್ನು ಬರಮಾಡಿಕೊಂಡು ಪೋಲೀಸರು ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಅದೇ ದಿನ ಮುದ್ದೆ ಮಾಲುಗಳನ್ನು ನಮ್ಮ ಸಮಕ್ಷಮ ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಅಂಶಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಅಂಶಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ಪಾಟೀ ಸವಾಲು: ಇಲ್ಲ

ಮರು ವಿಚಾರಣೆ: ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಸಿ ಸಿ ನಂ.**401/2015**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ರವಿ | ದಿನಾಂಕ | ಃ | 18-10-2023 |
| ತಂದೆಯ ಹೆಸರು | ಃ | ಗೌಡೇಗೌಡ | ಸಿ ಡಬ್ಲ್ಯೂ | ಃ | 4 |
| ವಯಸ್ಸು | ಃ | 35 ವರ್ಷ | ಪಿ ಡಬ್ಲ್ಯೂ | ಃ | 3 |
| ಉದ್ಯೋಗ | ಃ | ವ್ಯವಸಾಯ | | | |
| ವಿಳಾಸ | ಃ | ವಡ್ಡರಹಳ್ಳಿ ಗ್ರಾಮ | | | |

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಆರೋಪಿತರು ನನಗೆ ಗೊತ್ತು. ಚಾಸಾ-**1** ನನ್ನ ಚಿಕ್ಕಪ್ಪ. ಚಾಸಾ-**2** ನನ್ನ ಚಿಕ್ಕಮ್ಮ. ಚಾಸಾ-**3** ನನ್ನ ಚಿಕ್ಕಪ್ಪನ ಮಗ. **2014** ರಲ್ಲಿ ಬೆಳಿಗ್ಗೆ **8.00** ರಿಂದ **9.00** ಗಂಟೆ ಸಮಯದಲ್ಲಿ ಚಾಸಾ-**1** ರವರು ಜಮೀನಿನಲ್ಲಿ ಉಳುಮೆ ಮಾಡಲು ಹೋದರು. ನಂತರ ಚಾಸಾ-**1** ಮತ್ತು **2**ನೇ ಆರೋಪಿ ಹೊಡೆದಾಡುತ್ತಿದ್ದರು. ನಂತರ ನನ್ನ ಚಿಕ್ಕಪ್ಪ ಚಾಸಾ-**1** ರವರು ನಾನು ಉಳುಮೆ ಮಾಡುತ್ತಿದ್ದಾಗ ಜಮೀನಿಗೆ ಓಡಿ ಬಂದು ನನ್ನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ನಂತರ ಚಾಸಾ-**1** ರವನ್ನು ಆಸ್ಪತ್ರೆಗೆ ಸೇರಿಸಿ ನಾನು ಮನೆಗೆ ಬಂದೆ. ಚಾಸಾ-**1** ಮತ್ತು ಆರೋಪಿತರ ಜಗಳವಾಡುತ್ತಿದ್ದುದನ್ನು ನಾನು ನೋಡಿರುತ್ತೇನೆ. ಈ ವಿಚಾರ ಸಂಬಂದ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಮುಂದೆ ಏನಾಯಿತು ಎಂದು ನನಗೆ ಗೊತ್ತಿಲ್ಲ.

ಗಲಾಟೆಯಾದ ಮಾರನೆಯ ದಿನ ಪೋಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಪೋಲೀಸರು ನನ್ನ ಸಮಕ್ಷಮ ಯಾವ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ನ್ನು ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1**ಎ ಎಂದು ಗುರುತಿಸಲಾಯಿತು. ಮುದ್ದೆ ಮಾಲುಗಳನ್ನು ಪೋಲೀಸರು ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಗಿದೆ.

ಪಾಟೀ ಸವಾಲುಃ ಸಸಅ ರವರಿಂದ ಃ-

ದಿಃ **12-10-2014** ರಂದು ಬೆಳಿಗ್ಗೆ **10.30** ಗಂಟೆ ಸಮಯದಲ್ಲಿ **1**ನೇ ಆರೋಪಿ ಚಾಸಾ-**1** ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಚಾಸಾ-**1** ರವರು ನಮ್ಮ ಜಮೀನಿನಲ್ಲಿ ದನಗಳನ್ನು ಏಕೆ ಮೇಯಿಸುತ್ತಿದ್ದೀಯಾ ಎಂದು ಕೇಳಿದ್ದಕ್ಕೆ **1**ನೇ ಆರೋಪಿ ಈ ಜಮೀನು ನಮ್ಮ ಅಪ್ಪನಿಗೆ ಸೇರಬೇಕು, ನೀನು ಯಾರು ಕೇಳುವುದಕ್ಕೆ ಎಂದು ಮಾತಿಗೆ ಮಾತು ಬಂದಾಗ ಆರೋಪಿತರು ಹಳೇ ದ್ವೇಷದಿಂದ ಗುಂಪು ಕಟ್ಟಿಕೊಂಡು ಬಂದು ಚಾಸಾ-**1** ರವರನ್ನು ಸೂಳೇಮಗನೇ, ಬೋಳೀಮಗನೇ ಎಂದು ಅವ್ಯಾಚ ಶಬ್ದಗಳಿಂದ ಬೈದರು ಎಂದರೆ ಸರಿ. **5**ನೇ ಆರೋಪಿ ತನ್ನ ಕೈಯಲ್ಲಿ ಮಚ್ಚಿನಿಂದ ಚಾಸಾ-**1** ರವರ ತಲೆಗೆ ಹೊಡೆಯಲು ಹೋದಾಗ ಚಾಸಾ-**1** ರವರು ಎಡಗೈ ಅಡ್ಡ ನೀಡಿದಾಗ ಎಡಗೈ ರಟ್ಟೆಗೆ ಪೆಟ್ಟು ಬಿದ್ದು ರಕ್ತಗಾಯವಾಯಿತು, ನಂತರ ಚಾಸಾ-**1** ರವರು ಕೆಳಕ್ಕೆ ಬಿದ್ದಾಗ **3**ನೇ ಆರೋಪಿ ಕುಡುಗೋಲಿನಿಂದ ಚಾಸಾ-**1** ರವರು ಎಡಗಾಲಿನ ಮೀನುಖಂಡಕ್ಕೆ ಹೊಡೆದು ರಕ್ತ ಗಾಯ ಮಾಡಿದರು, ಚಾಸಾ-**2** ರವರು ಜಗಳವನ್ನು ಬಿಡಿಸಲು ಹೋದಾಗ **1**ನೇ ಆರೋಪಿ ಮುದ್ದೆ ಮಾಲು **1** ರಿಂದ ಚಾಸಾ-**2** ರವರ ಎಡಗಾಲಿನ ಮಂಡಿ ಮತ್ತು ಎಡಭುಜಕ್ಕೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ನಾನು ಜಗಳವನ್ನು ಕಣ್ಣಾರೆ

ನೋಡಿಲ್ಲ ಎಂದು ನುಡಿಯುತ್ತಾರೆ. ನಂತರ ನಾನು ಮತ್ತು ಚಾಸಾ-3 ರವರು ಬಂದು ಜಗಳ ಬಿಡಿಸಿದೆವು ಎಂದರೆ ಸರಿ. ನಂತರ ಚಾಸಾ-1 ಮತ್ತು 2 ರವನ್ನು ನಾನು ಮತ್ತು ಚಾಸಾ-3 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದೆವು ಎಂದರೆ ಸರಿ. ಅದೇ ದಿನ ಚಾಸಾ-1 ರವರು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ ಎಂರದೆ ಸರಿ.

ಅದೇ ದಿನ ಸರ್ವೆ ನಂ.31/2 ರ ಜಮೀನಿನಲ್ಲಿ ಪೋಲೀಸರು ಚಾಸಾ-3 ರವರು ತೋರಿಸಿದ ಸ್ಥಳದ ಮೇರೆಗೆ ನನ್ನ ಮತ್ತು ಚಾಸಾ-5 ಮತ್ತು 6 ರವರ ಸಮಕ್ಷಮ ನಿಪಿ-1 ರಂತೆ ಮಹಜರ್ ಮಾಡಲಾಯಿತು ಎಂದರೆ ಸರಿ. ಮಹಜರ್ ಸಮಯದಲ್ಲಿ ಪೋಲೀಸರು ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದರು ಎಂದರೆ ಸರಿ. ನಿಪಿ-1 ಕ್ಕೆ ನನ್ನ ಹಾಗೂ ಚಾಸಾ-5 ಮತ್ತು 6 ರವರ ಸಹಿಗಳನ್ನು ಪೋಲೀಸರು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂದಪಟ್ಟಂತೆ ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ ವಕೀಲರಿಂದಃ

ಚಾಸಾ-1 ರವರ ಜಮೀನಿಗೂ ಮತ್ತು ನನ್ನ ಜಮೀನಿಗೂ ಸುಮಾರು 5 ಅಡಿ ಅಂತರ ಇದೆ. ನಾನು ನನ್ನ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಏನು ಬೈದಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಹೊಡೆದರು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಹೇಳಿದ ಮೇರೆಗೆ ನನಗೆ ಗಲಾಟೆ ಬಗ್ಗೆ ಗೊತ್ತಾಯಿತು. ಗಲಾಟೆಯಾದ ಒಂದು ಗಂಟೆ ಗಲಾಟೆ ಸ್ಥಳದಲ್ಲಿ ಇದ್ದು ನಂತರ ಪೋ. ಠಾಣೆಗೆ 11.00 ಗಂಟೆಗೆ ಕರೆದುಕೊಂಡು ಹೋದೆವು. ದೂರನ್ನು ಚಾಸಾ-3 ರವರು ನೀಡಿರುತ್ತಾರೆ. ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ ನಂತರ ಆಸ್ಪತ್ರೆಗೆ 12.00 ಗಂಟೆಗೆ ಹೋದೆವು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಸಮಯದಲ್ಲಿ ಪೋಲೀಸರು ಏನು ವಶಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲಗಳನ್ನು ಚಾಸಾ-1 ರವರು ಪೋಲೀಸರಿಗೆ ಕೊಟ್ಟಿರುತ್ತಾರೆ. ನಿಪಿ-1 ಕ್ಕೆ ನಾನು, ಚಾಸಾ-3 ರವನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಸಿ ಸಿ ನಂ.**401/2015**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ರೇವಣ್ಣ ಉಃ ರವಿ | ದಿನಾಂಕ | ಃ | 18-10-2023 |
| ತಂದೆಯ ಹೆಸರು | ಃ | ಲೇಟ್ ಚಂದ್ರೇಗೌಡ | ಸಿ ಡಬ್ಲ್ಯೂ | ಃ | 3 |
| ವಯಸ್ಸು | ಃ | 45 ವರ್ಷ | ಪಿ ಡಬ್ಲ್ಯೂ | ಃ | 2 |
| ಉದ್ಯೋಗ | ಃ | ವ್ಯವಸಾಯ | | | |
| ವಿಳಾಸ | ಃ | ವಡ್ಡರಹಳ್ಳಿ ಗ್ರಾಮ | | | |

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಆರೋಪಿತರು ನನಗೆ ಗೊತ್ತು. ಚಾಸಾ-**1** ನನ್ನ ತಂದೆ. ಚಾಸಾ-**2** ನನ್ನ ತಾಯಿ. **2014** ರಲ್ಲಿ ಬೆಳಿಗ್ಗೆ **10.00** ಗಂಟೆ ಸಮಯದಲ್ಲಿ ಚಾಸಾ-**1** ಮತ್ತು **2** ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು.

ಆರೋಪಿತರು ಜಮೀನಿನ ಒಳಗೆ ಬಂದು ಏಕೆ ಕೆಲಸ ಮಾಡುತ್ತಿದ್ದೀರಾ ಎಂದು ಬಾಯಿಗೆ ಬಂದಂತೆ ಬೈದು ಜಗಳ ಮಾಡಿರುತ್ತಾರೆ. **5** ನೇ ಆರೋಪಿ ಚಾಸಾ**-1** ರವರ ತಲೆಗೆ ಮಚ್ಚಿ ನಿಂದ ಹೊಡೆಯಲು ಹೋದಾಗ ಚಾಸಾ**-1** ರವರು ತಮ್ಮ ಎಡಗೈ ಅಡ್ಡನೀಡಿದ್ದರಿಂದ ಕೈಗೆ ಮಚ್ಚಿನ ಏಟು ಬಿದ್ದು ಗಾಯವಾಯಿತು. **3**ನೇ ಆರೋಪಿ ಚಾಸಾ**-1** ರವರಿಗೆ ಕುಡುಗೋಲಿನಿಂದ ಹೊಡೆದರು. ನಂತರ **1**ನೇ ಆರೋಪಿ ಚಾಸಾ**-2** ರವರಿಗೆ ದೊಣ್ಣೆಯಿಂದ ಮಂಡಿಗೆ ಹೊಡೆದು ಗಾಯ ಮಾಡಿರುತ್ತಾರೆ. ಆಗ ಚಾಸಾ**-4** ಮತ್ತು ನಾನು ಚಾಸಾ**-1** ಮತ್ತು **2**ರವನ್ನು ಕೊಣನೂರು ಸರ್ಕಾರಿಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ನಂತರ ಚಾಸಾ **-1** ಮತ್ತು **2** ರವನ್ನು ಆಸ್ಪತ್ರೆಗೆ ದಾಖಲಿಸಿ ನಾನು ದೂರನ್ನು ನೀಡಿರುತ್ತೇನೆ. ನಂತರ ಪೋಲೀಸರು ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ. ಅಲ್ಲಿಂದ ಜಮೀನಿಗೆ ನಮ್ಮನ್ನು ಬಿಡುತ್ತಿಲ್ಲ. ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಗಿದೆ.

ಪಾಟೀ ಸವಾಲುಃ ಸಸಅ ರವರಿಂದ ಃ-

ದಿಃ **12-10-2014** ರಂದು ಬೆಳಿಗ್ಗೆ **10.30** ಗಂಟೆ ಸಮಯದಲ್ಲಿ **1**ನೇ ಆರೋಪಿ ನಮ್ಮ ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಚಾಸಾ**-1** ರವರು ನಮ್ಮ ಜಮೀನಿನಲ್ಲಿ ದನಗಳನ್ನು ಏಕೆ ಮೇಯಿಸುತ್ತಿದ್ದೀಯಾ ಎಂದು ಕೇಳಿದ್ದಕ್ಕೆ **1**ನೇ ಆರೋಪಿ ಈ ಜಮೀನು ನಮ್ಮ ಅಪ್ಪನಿಗೆ ಸೇರಬೇಕು, ನೀನು ಯಾರು ಕೇಳುವುದಕ್ಕೆ ಎಂದು ಮಾತಿಗೆ ಮಾತು ಬಂದಾಗ ಆರೋಪಿತರು ಹಳೇ ದ್ವೇಷದಿಂದ ಗುಂಪು ಕಟ್ಟಿಕೊಂಡು ಬಂದು ಚಾಸಾ**-1** ರವರನ್ನು ಸೂಳೇಮಗನೇ, ಬೋಳೀಮಗನೇ ಎಂದು ಅವ್ಯಾಚ ಶಬ್ದಗಳಿಂದ ಬೈದರು ಎಂದರೆ ಸರಿ. **5**ನೇ ಆರೋಪಿ ತನ್ನ ಕೈಯಲ್ಲಿ ಮಚ್ಚಿನಿಂದ ಚಾಸಾ**-1** ರವರ ತಲೆಗೆ ಹೊಡೆಯಲು ಹೋದಾಗ ಚಾಸಾ**-1** ರವರು ಎಡಗೈ ಅಡ್ಡ ನೀಡಿದಾಗ ಎಡಗೈ ರಟ್ಟೆಗೆ ಪೆಟ್ಟು ಬಿದ್ದು ರಕ್ತಗಾಯವಾಯಿ ತು ಎಂದರೆ ಸರಿ. ನಂತರ ಚಾಸಾ**-1** ರವರು ಕೆಳಕ್ಕೆ ಬಿದ್ದಾಗ **3**ನೇ ಆರೋಪಿ ಕುಡುಗೋಲಿನಿಂದ ಚಾಸಾ**-1** ರವರು ಎಡಗಾಲಿನ ಮೀನುಖಂಡಕ್ಕೆ ಹೊಡೆದು ರಕ್ತ ಗಾಯ ಮಾಡಿದರು ಎಂದರೆ ಸರಿ. ಚಾಸಾ**-2** ರವರು ಜಗಳವನ್ನು ಬಿಡಿಸಲು ಹೋದಾಗ **1**ನೇ ಆರೋಪಿ ಮುದ್ದೆ ಮಾಲು **1** ರಿಂದ ಚಾಸಾ**-2** ರವರ ಎಡಗಾಲಿನ ಮಂಡಿ ಮತ್ತು ಎಡಭುಜಕ್ಕೆ ಹೊಡೆದು ನೋವುಂಟು ಮಾಡಿದ ಎಂದರೆ ಸರಿ. ಅಷ್ಟರಲ್ಲಿ ಅಲ್ಲಿಗೆ ಚಾಸಾ**-4** ಮತ್ತು ನಾನು ಬಂದು ಜಗಳ ಬಿಡಿಸಿದೆವು. ನಂತರ ಚಾಸಾ**-1** ರವರು ಆಸ್ಪತ್ರೆಯಲ್ಲಿದ್ದಾಗ ಹೇಳಿಕೆಯನ್ನು ಕೊಟ್ಟಿರುವ ಮೇರೆಗೆ ಈ ಪ್ರಕರಣದ ದೂರು ದಾಖಲಾಯಿತು ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ ವಕೀಲರಿಂದಃ

ಸರ್ವೆ ನಂ. 31/2 ರ ಜಮೀನನ್ನು ಆರೋಪಿತರು ಸುಮಾರು 40 ವರ್ಷಗಳ ಹಿಂದಿನಿಂದಲೂ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನು ನನ್ನ ತಂದೆಯ

ಹೆಸರಿನಲ್ಲಿದೆ ಎಂದು ತೋರಿಸಲು ದಾಖಲೆ ಇದೆ. ಸದರಿ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿದ್ದೇವೆ. ಘಟನೆಯ ದಿನಾಂಕದಂದು ನಾನು, ಚಾಸಾ-1 ಮತ್ತು 2 ರವರು ಜಮೀನನ್ನು ಉಳುಮೆ ಮಾಡುತ್ತಿದ್ದೆವು. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಘಟನೆಯ ದಿನಾಂಕದಂದು ನಾನು ಮತ್ತು ಚಾಸಾ-4 ರವರನ್ನು ಹೊರತು ಪಡಿಸಿ ಬೇರೆ ಯಾರೂ ಘಟನಾ ಸ್ಥಳಕ್ಕೆ ಬರಲಿಲ್ಲ. ಗಲಾಟೆ ಸುಮಾರು ಒಂದು ಗಂಟೆ ಆಯಿತು. ಚಾಸಾ-4 ರವರು ಅವರ ಮನೆಯ ಹತ್ತಿರ ಇರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಜಗಳ ಪ್ರಾರಂಭವಾದ ತಕ್ಷಣ ಚಾಸಾ-4 ರವರು ಸ್ಥಳಕ್ಕೆ ಬಂದರು. 5ನೇ ಆರೋಪಿ ಚಾಸಾ-1 ರವರ ಎಡಗೈ ರಟ್ಟೆಗೆ ಹೊಡೆದರು. ಆಗ ಚಾಸಾ-1ರವರಿಗೆ ರಕ್ತಗಾಯವಾಯಿತು. ಚಾಸಾ-1 ರವರ ಬಟ್ಟೆಗೆ ರಕ್ತವಾಯಿತು. ನೆಲಕ್ಕೆ ರಕ್ತ ಬಿದ್ದಿತ್ತು. 1ನೇ ಆರೋಪಿ ಚಾಸಾ-2 ರವರ ಮಂಡಿಗೆ ಮತ್ತು ಬುಜಕ್ಕೆ ಹೊಡೆದಿರುತ್ತಾರೆ.

ಘಟನೆಯಾದ ಒಂದು ಗಂಟೆ ಸ್ಥಳದಲ್ಲಿ ಇದ್ದು ನಂತರ ಕೊಣನೂರು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಪೋಲೀಸ್ ಠಾಣೆ ಆದ ನಂತರ ಆಸ್ಪತ್ರೆ ಇದೆ ಎಂದರೆ ಸರಿ. ಆ ಸಮಯದಲ್ಲಿ ಪೋ. ಠಾಣೆಗೆ ಹೋಗದೇ ಆಸ್ಪತ್ರೆಗೆ ಹೋಗಿ ಚಾಸಾ-1 ಮತ್ತು 2 ರವರನ್ನು ದಾಖಲಿಸಿ ನಂತರ ಪೋ. ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ವೈದ್ಯರು ಎಷ್ಟು ಗಂಟೆಗೆ ಬಂದು ಚಾಸಾ-1 ಮತ್ತು 2 ರವರಿಗೆ ಚಿಕಿತ್ಸೆ ನೀಡಿದರು ಎಂದು ಸಮಯ ಗೊತ್ತಿಲ್ಲ. ಚಾಸಾ-1 ಮತ್ತು 2 ರವರು ಸುಮಾರು 15 ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನಂತರ ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಮುದ್ದೆ ಮಾಲುಗಳು ಘಟನೆಗೆ ಉಪಯೋಗಿಸಿದ ವಸ್ತುಗಳೆಂದು ಹೇಳಲು ವಿಶಿಷ್ಟವಾದ ಗುರುತುಗಳಿಲ್ಲ. ಮುದ್ದೆ ಮಾಲುಗಳು ಊರಿನಲ್ಲಿ ಹಾಗೂ ಪ್ರತಿಯೊಂದು ಮನೆಯಲ್ಲೂ ಸಿಗುತ್ತವೆ ಎಂದರೆ ಸರಿ. ಚಾಸಾ-1 ಮತ್ತು 2 ರವರನ್ನು ದಾಖಲಿಸಿದ ನಂತರ ಮುದ್ದೆ ಮಾಲುಗಳನ್ನು ತೆಗೆದುಕೊಂಡು ಹೋಗಿ ಪೋಲಿಸ್ ಠಾಣೆಯಲ್ಲಿ ಪೋಲೀಸರಿಗೆ ಕೊಟ್ಟಿರುತ್ತೇವೆ.

ಸರ್ವೆ ನಂ.31/2 ರ ಜಮೀನಿನ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಮನಸ್ತಾಪ ಇದೆ ಎಂದರೆ ಸರಿ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ರಕ್ತವಾದ ಬಟ್ಟೆಯನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ. ಆರೋಪಿತರು

ತಪ್ಪು ಮಾಡಿದೇ ಇದ್ದರೂ ಮುದ್ದೆ ಮಾಲುಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಸಿ ಸಿ ನಂ.**401/2015**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಶಾರದಮ್ಮ | ದಿನಾಂಕ | ಃ | 18-10-2023 |
| ಗಂಡನ ಹೆಸರು | ಃ | ಲೇಟ್ ಚಂದ್ರೇಗೌಡ | ಸಿ ಡಬ್ಲ್ಯೂ | ಃ | 2 |
| ವಯಸ್ಸು | ಃ | 64 ವರ್ಷ | ಪಿ ಡಬ್ಲ್ಯೂ | ಃ | 1 |
| ಉದ್ಯೋಗ | ಃ | ವ್ಯವಸಾಯ | | | |
| ವಿಳಾಸ | ಃ | ವಡ್ಡರಹಳ್ಳಿ ಗ್ರಾಮ | | | |

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಆರೋಪಿತರು ನನಗೆ ಗೊತ್ತು. ಚಾಸಾ-**1** ನನ್ನ ಗಂಡ. **2014** ರಲ್ಲಿ ಬೆಳಿಗ್ಗೆ **10.00** ರಿಂದ **10.30** ಗಂಟೆ ಸಮಯದಲ್ಲಿ ನನ್ನ ಮಕ್ಕಳು ವ್ಯವಸಾಯ ಮಾಡುತ್ತಿದ್ದಾಗ ಆರೋಪಿತರು ನಮ್ಮ ಜಮೀನಿಗೆ ಬಂದು ಅವ್ಯಾಚ ಶಬ್ದಗಳಿಂದ ಬೈದು **1**ನೇ ಆರೋಪಿ ನನಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. **3**ನೇ ಆರೋಪಿ ನನ್ನ ಗಂಡನಾದ ಚಾಸಾ-**1** ರವರಿಗೆ ಮಚ್ಚಿನಿಂದ ಹೊಡೆದಿರುತ್ತಾರೆ.ಉಳಿದ ಆರೋಪಿತರು ಸಹಾ ಚಾಸಾ-**1** ಮತ್ತು ನನಗೆ ಹೊಡೆದಿರುತ್ತಾರೆ. ನಂತರ ಚಾಸಾ-**1** ಮತ್ತು ನನ್ನನ್ನು

ಚಾಸಾ-**4** ರವರು ಕೋಣನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ನಾನು ಮತ್ತು ಚಾಸಾ-**1** ರವರು ಸುಮಾರು **20** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆವು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ದೊಣ್ಣೆ, ಒಂದು ಮಚ್ಚು ಮತ್ತು ಒಂದು ಕುಡುಗೋಲನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು **1** ರಿಂದ **3** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಗಿದೆ.

ಪಾಟೀ ಸವಾಲುಃ ಸಸಅ ರವರಿಂದ ಃ-

ದಿಃ **12-10-2014** ರಂದು ಬೆಳಿಗ್ಗೆ **10.30** ಗಂಟೆ ಸಮಯದಲ್ಲಿ **1**ನೇ ಆರೋಪಿ ನಮ್ಮ ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಚಾಸಾ-**1** ರವರು ನಮ್ಮ ಜಮೀನಿನಲ್ಲಿ ದನಗಳನ್ನು ಏಕೆ ಮೇಯಿಸುತ್ತಿದ್ದೀಯಾ ಎಂದು ಕೇಳಿದ್ದಕ್ಕೆ **1**ನೇ ಆರೋಪಿ ಈ ಜಮೀನು ನಮ್ಮ ಅಪ್ಪನಿಗೆ ಸೇರಬೇಕು, ನೀನು ಯಾರು ಕೇಳುವುದಕ್ಕೆ ಎಂದು ಮಾತಿಗೆ ಮಾತು ಬಂದಾಗ ಆರೋಪಿತರು ಹಳೇ ದ್ವೇಷದಿಂದ ಗುಂಪು ಕಟ್ಟಿಕೊಂಡು ಬಂದು ಚಾಸಾ-**1** ರವರನ್ನು ಸೂಳೇಮಗನೇ, ಬೋಳೀಮಗನೇ ಎಂದು ಅವ್ಯಾಚ ಶಬ್ದಗಳಿಂದ ಬೈದರು ಎಂದರೆ ಸರಿ. **5**ನೇ ಆರೋಪಿ ತನ್ನ ಕೈಯಲ್ಲಿ ಮಚ್ಚಿನಿಂದ ಚಾಸಾ-**1** ರವರ ತಲೆಗೆ ಹೊಡೆಯಲು ಹೋದಾಗ ಚಾಸಾ-**1** ರವರು ಎಡಗೈ ಅಡ್ಡ ನೀಡಿದಾಗ ಎಡಗೈ ರಟ್ಟೆಗೆ ಪೆಟ್ಟು ಬಿದ್ದು ರಕ್ತಗಾಯವಾಯಿತು ಎಂದರೆ ಸರಿ. ನಂತರ ಚಾಸಾ-**1** ರವರು ಕೆಳಕ್ಕೆ ಬಿದ್ದಾಗ **3**ನೇ ಆರೋಪಿ ಕುಡುಗೋಲಿನಿಂದ ಚಾಸಾ-**1** ರವರು ಎಡಗಾಲಿನ ಮೀನುಖಂಡಕ್ಕೆ ಹೊಡೆದು ರಕ್ತ ಗಾಯ ಮಾಡಿದರು ಎಂದರೆ ಸರಿ. ನಾನು ಜಗಳವನ್ನು ಬಿಡಿಸಲು ಹೋದಾಗ **1**ನೇ ಆರೋಪಿ ಮುದ್ದೆ ಮಾಲು **1** ರಿಂದ ನನ್ನ ಎಡಗಾಲಿನ ಮಂಡಿ ಮತ್ತು ಎಡಭುಜಕ್ಕೆ ಹೊಡೆದು ನೋವುಂಟು ಮಾಡಿದ ಎಂದರೆ ಸರಿ. ಅಷ್ಟರಲ್ಲಿ ಅಲ್ಲಿಗೆ ಚಾಸಾ-**3** ಮತ್ತು **4** ರವರುಗಳು ಬಂದು ಜಗಳ ಬಿಡಿಸಿದರು ಎಂದರೆ ಸರಿ. ಈ ವಿಚಾರ ಸಂಬಂದ ಚಾಸಾ-**1** ರವರು ದೂರು ದಾಖಲಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ ವಕೀಲರಿಂದಃ

ನಾವು ಉಳುಮೆ ಮಾಡುತ್ತಿದ್ದ ಜಮೀನಿನ ಸರ್ವೆ ನಂ.31/2. ಸದರಿ ಜಮೀನು ನನ್ನ ಗಂಡನ ಹೆಸರಿನಲ್ಲಿದೆ. ಸದರಿ ಜಮೀನು ನನ್ನ ಗಂಡನ ಹೆಸರಿನಲ್ಲಿದೆ ಎಂದು ತೋರಿಸಲು ಪಹಣಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ಸದರಿ ಜಮೀನು ನನ್ನ ಗಂಡನ ಜಮೀನು ಅಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 31/2 ನ್ನು 2ನೇ ಆರೋಪಿ ಹಾಗೂ ಅವರ ಮಕ್ಕಳಾದ ಇತರೆ ಆರೋಪಿತರು ಸುಮಾರು 40 ವರ್ಷಗಳಿಂದ

ಬೇಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-1 ಬದುಕಿದ್ದಾಗ ಊರಿನಲ್ಲಿ ಗಲಾಟೆಯಾಗಿ ಚಾಸಾ-1 ರವರು ಪೋಲೀಸ್ ಠಾಣೆಗೆ ಹಾಗೂ ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟು ಜಮೀನನ್ನು ಬಿಡಿಸಿಕೊಡಿ ಎಂದು ಕೋರಿದ್ದರು ಎಂದರೆ ಸರಿ. ನಂತರ ಪೋಲೀಸರು ಹಾಗೂ ತಹಶೀಲ್ದಾರ ರವರು ಇದು ಸಿವಿಲ್ ವ್ಯಾಜ್ಯ ಆದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದರು ಎಂದರೆ ಸರಿ. ನಂತರ 2ನೇ ಆರೋಪಿ ಚಾಸಾ-1 ರವರ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿದ್ದರು ಎಂದರೆ ಸರಿ.

ಗಲಾಟೆ ಸ್ಥಳಕ್ಕೂ ಮತ್ತು ನಮ್ಮ ಊರಿಗೂ ಹತ್ತಿರ ಇದೆ. ಆ ಸಮಯದಲ್ಲಿ ಕೂಗಾಟ ಆಗಿದ್ದು, ಚಾಸಾ-4 ರವರನ್ನು ಹೊರತುಪಡಿಸಿ ಬೇರೆ ಯಾರೂ ಘಟನಾ ಸ್ಥಳಕ್ಕೆ ಬರಲಿಲ್ಲ. ಘಟನಾ ಸ್ಥಳದಲ್ಲಿ ಚಾಸಾ-1 ಮತ್ತು ನಾನು ಇದ್ದೆವು, ಯಾಕೆ ಉಳುಮೆ ಮಾಡುತ್ತಿದ್ದೀರಾ ಎಂದು ಕೇಳಲು ಹೋದೆವು. ಚಾಸಾ-4 ರವರು ಅವರ ಜಮೀನಿನಲ್ಲಿ ಹೊಲ ಊಳುತ್ತಿದ್ದರು, ಗಲಾಟೆ 11.00 ಗಂಟೆಯವರೆಗೆ ಆಯಿತು. ನಂತರ 11.00 ಗಂಟೆಗೆ ಘಟನಾ ಸ್ಥಳದಿಂದ ಹೊರಟು 12.00 ಗಂಟೆಗೆ ಕೊಣನೂರಿನ ಸರ್ಕಾರಿ ಆಸ್ಪತ್ರೆಗೆ ಬಂದೆವು. ಆಟೋ ಸಂಖ್ಯೆ ಮತ್ತು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಕೊಣನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗುವ ಮೊದಲು ಕೊಣನೂರಿನ ಪೋಲೀಸ್ ಠಾಣೆ ಮೊದಲು ಸಿಗುತ್ತದೆ ಎಂದರೆ ಸರಿ. ನಂತರ ನಾವು ಪೋಲೀಸ್ ಠಾಣೆಗೆ ಹೋಗಿ ಗಲಾಟೆಯ ಬಗ್ಗೆ ದೂರನ್ನು ಕೊಟ್ಟೆವು. ನಾನು ಮತ್ತು ಚಾಸಾ-1 ರವರು ಸರ್ಕಾರಿ ಆಸ್ಪತ್ರೆಗೆ ಹೋದೆವು. ನನ್ನ ಮಕ್ಕಳು ಹೋಗಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ನಾನು ಕೊಣನೂರು ಪೋಲೀಸ್ ಠಾಣೆಗೆ ಹೋಗಿಲ್ಲ, ಅದೇ ದಿನ ದೂರು ಕೊಟ್ಟಿರಬಹುದು. ನಾನು ಆಸ್ಪತ್ರೆಗೆ ಸುಮಾರು 4.00 ಗಂಟೆಗೆ ಹೋಗಿರುತ್ತೇನೆ. ನಂತರ ವೈದ್ಯರು ತಕ್ಷಣ ನನಗೆ ಮತ್ತು ಚಾಸಾ-1 ರವರಿಗೆ ಚಿಕಿತ್ಸೆ ನೀಡಿರುತ್ತಾರೆ. ಯಾರು ಯಾವುದರಿಂದ ಎಲ್ಲಿ ಹಲ್ಲೆ ಮಾಡಿದರು ಎಂದು ನಾನು ವೈದ್ಯರಿಗೆ ಮಾಹಿತಿ ಕೊಟ್ಟಿರುತ್ತೇನೆ. 1ನೇ ಆರೋಪಿ ನನಗೆ ಎಡಭುಜ ಮತ್ತು ಎಡತೊಡೆಗೆ ಹೊಡೆದರು. ನನಗೆ ಯಾವುದೇ ರಕ್ತಗಾಯವಾಗಿರಲಿಲ್ಲ, ಆದರೆ ಒಳನೋವು ಆಗಿತ್ತು. ಚಾಸಾ-1 ರವರಿಗೆ 1ನೇ ಆರೋಪಿ ಎಲ್ಲೆಲ್ಲಿಗೆ ಹೊಡೆದರು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ರಕ್ತ ಕೆಳಕ್ಕೆ ಬಿದ್ದಿತ್ತಾ ಎಂದರೆ ಬಿದ್ದಿತ್ತು. ಘಟನಾ ಸ್ಥಳದ ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿಂಗರಾಜನ ಜಮೀನು, ದಕ್ಷಿಣಕ್ಕೆ ನನ್ನ ಬಾವ ಗೌಡೇಗೌಡನ ಜಮೀನು ಇರುತ್ತದೆ.

ಆಸ್ಪತ್ರೆಯಲ್ಲಿ ನಾನು ಮತ್ತು ಚಾಸಾ-1 ರವರು 15 ದಿನ ಇದ್ದೆವು. 1 ರಿಂದ 3 ಮುದ್ದೆ ಮಾಲುಗಳಿಂದ ನಮಗೆ ಹಲ್ಲೆ ಮಾಡಿರುತ್ತಾರೆ. ಮುದ್ದೆ ಮಾಲು 1 ರಿಂದ 3 ನ್ನು ನನ್ನ ಮಕ್ಕಳು ಪೋಲೀಸರಿಗೆ ಕೊಟ್ಟಿರಬಹುದು.

" ದಿ:12-10-2014 ರಂದು ಬೆಳಿಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ನಮ್ಮ ಅಣ್ಣ ರಾಜೇಗೌಡರ ಮಗ ............ ಬಾಯಿಗೆ ಬಂದಂತೆ ಬೈದರು ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. 5ನೇ ಆರೋಪಿ .................... ಇಬ್ಬರೂ ಸೇರಿ ಜಗಳ ಬಿಡಿಸಿ ಸಮಾಧಾನ ಮಾಡಿದರು ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿ -1 ಮತ್ತು 2 ಎಂದು ಗುರುತಿಸಲಾಯಿತು. ಘಟನೆಯ ಸಂಬಂದ ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಮುದ್ದೆ ಮಾಲುಗಳು ಈ ಘಟನೆಗೆ ಸಂಬಂದಿಸಿದ್ದಲ್ಲ, ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಯಾವುದೇ ರೀತಿಯ ಹಲ್ಲೆ ಮಾಡಿಲ್ಲ, ಚಾಸಾ-1 ರವರು ಮರ ಹತ್ತಿ ಕೆಲಸ ಮಾಡುವಾಗ ಬಿದ್ದು ಹಾಗೂ ನಾನು ವ್ಯವಸಾಯ ಮಾಡುವಾಗ ಬಿದ್ದು ಗಾಯಗೊಂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.31/2 ರ ಜಮೀನಿನ ವಿಚಾರವಾಗಿ ನನ್ನ ಮತ್ತು ಆರೋಪಿತರ ನಡುವೆ ಮನಸ್ತಾಪ ಇದೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**